ಓ.ಎಸ್. ನಂ. 294/2021
ಪಿ.ಡಬ್ಲ್ಯೂ: 01 (ಮಲ್ಲಿನಾಥ)

ದಿನಾಂಕಃ 20.12.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.
ಪಾಟೀ ಸವಾಲುಃ ಪ್ರತಿವಾದಿ ಪರ – ಶ್ರೀ KSN ವಕೀಲರಿಂದ.

ನನ್ನ ಜಮೀನಿನಲ್ಲಿರುವ ಬೋರನ್ನು ಅವರು ಅತಿಕ್ರಮವಾಗಿ ಉಪಯೋಗಿಸುತ್ತಿರುತ್ತಾರೆ. ಆ ಕಾರಣ ಈ ದಾವೆಯನ್ನು ಸಲ್ಲಿಸಿರುತ್ತೇನೆ. ದಾವಾ ಆಸ್ತಿ ಮೂಲತಃ ನನ್ನ ತಂದೆಯ ತಮ್ಮನಾದ ಚಿಕ್ಕಪ್ಪನ ಹೆಸರಿನಲ್ಲಿತ್ತು. ದಾವಾ ಸ್ವತ್ತು ದಿಃ 01.12.2010 ರಂದು ಮಾಡಿಕೊಂಡ ಪಾಲು ವಿಭಾಗದ ಮೂಲಕ ಬಂದಿರುತ್ತದೆ. ಸದರಿ ಪಾಲು ವಿಭಾಗ ಪತ್ರವನ್ನು ನೊಂದಣಿ ಮಾಡಿಸಿರುವುದಿಲ್ಲ ಹಾಗೂ ಅದನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ಸದರಿ ದಾಖಲಾತಿ ಬ್ಯಾಂಕಿನಲ್ಲಿರುವ ಕಾರಣ ಹಾಜರುಪಡಿಸಲು ಆಗಿರುವುದಿಲ್ಲ. ವಿಭಾಗ ಆಗುವ ಪೂರ್ವದಲ್ಲಿ ಅದು ಜಂಟಿ ಕುಟುಂಬದ ಆಸ್ತಿಯಾಗಿತ್ತು ಎಂದರೆ ಹೌದು. ಪಾಲು ವಿಭಾಗ ಆಗುವ ಮೊದಲು ದಾವಾ ಸ್ವತ್ತಿನಲ್ಲಿ 1 ನೇ ಪ್ರತಿವಾದಿ 3 ಕೊಳವೆ ಬಾವಿಯನ್ನು ಹಾಕಿಸಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಜಂಟಿ ಕುಟುಂಬದಲ್ಲಿದ್ದಾಗ 1 ನೇ ಪ್ರತಿವಾದಿ, ನಾನು ಹಾಗೂ ನನ್ನ ತಂದೆಯ ತಮ್ಮನಾದ ಚಿಕ್ಕಪ್ಪರವರು ಸೇರಿ 2 ಕೊಳವೆ ಬಾವಿಯನ್ನು ಹಾಕಿಸಿದ್ದೆವು. ಸದರಿ 2 ಕೊಳವೆ ಬಾವಿಯನ್ನು 1998 ಮತ್ತು 2000 ರಲ್ಲಿ ಹಾಕಿಸಿರುತ್ತೇವೆ. 2009 ರಲ್ಲಿ ನಾನು ಸಿಡ್ಸ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೆ. ಸದರಿ ಕಂಪನಿ ರಾಣೆಬೆನ್ನೂರಿನಲ್ಲಿತ್ತು ಎಂದರೆ ಹೌದು. 2009 ರಲ್ಲಿ ಜಮೀನಿನಲ್ಲಿದ್ದ 2 ಕೊಳವೆ ಬಾವಿಗಳು ಬತ್ತಿಹೋಗಿದ್ದವು ಎಂದರೆ ಸರಿಯಲ್ಲ. ಆ ರೀತಿ ಬತ್ತಿಹೋದ ಕಾರಣ 2009 ನೇ ಇಸವಿಯಲ್ಲಿ 1 ನೇ ಪ್ರತಿವಾದಿಗಳು ದಾವಾ ಆಸ್ತಿಯಲ್ಲಿ ಮತ್ತೊಂದು ಕೊಳವೆ ಬಾವಿಯನ್ನು ಹಾಕಿಸಿದ್ದರು ಎಂದರೆ ನನ್ನ ಜಮೀನಿನಲ್ಲಿ ಅವರು ಯಾವುದೇ ಕೊಳವೆ ಬಾವಿಯನ್ನು ಹಾಕಿಸಿರುವುದಿಲ್ಲ. 2009 ರಲ್ಲಿ ಅದು ನನ್ನ ಜಮೀನು ಆಗಿರಲಿಲ್ಲ ಎಂದರೆ ನಾವು 2007 ರಿಂದಲೇ ಬೇರೆಯಾಗಿದ್ದೆವು. ಆ ಬಗ್ಗೆ ಯಾವುದಾದರೂ ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ ಎಂದರೆ ಬಾಯಿ ಮಾತಿನ ಮೂಲಕ ಹಂಚಿಕೊಂಡು ಪ್ರತ್ಯೇಕ ಸ್ವಾಧೀನದಲ್ಲಿದ್ದೆವು. ದಿಃ 01.12.2010 ರ ಪತ್ರದಲ್ಲಿ 2007 ರ ಬಾಯಿ ಮಾತಿನ ಮೂಲಕ ಆದ ವಿಭಾಗದ ಬಗ್ಗೆ ನಮೂದು ಮಾಡಿರುವುದಿಲ್ಲ. ಹಾಗಿದ್ದರೆ 2007 ರಲ್ಲಿ ನಾವು ಭಾಗ ಮಾಡಿಕೊಂಡಿದ್ದೆವು ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ.

2010 ರಲ್ಲಿ ದಾವಾ ಆಸ್ತಿಯನ್ನು ನನ್ನ ಹೆಸರಿಗೆ ವರ್ಗಾವಣೆ ಮಾಡಲು ಅರ್ಜಿ ನೀಡಿದ್ದು, 2013 ರಲ್ಲಿ ನನ್ನ ಹೆಸರಿಗೆ ಆಸ್ತಿ ವರ್ಗಾವಣೆಯಾಗಿರುತ್ತದೆ. ಆ ರೀತಿ ತಹಶೀಲ್ದಾರ್ ನ್ಯಾಯಾಲಯದಲ್ಲಿ ಆದೇಶ ಆಗಿರುತ್ತದೆ. ನನ್ನ ತಂದೆಯ ತಮ್ಮನಾದ ಚಿಕ್ಕಪ್ಪರವರಿಗೆ ನಾವು ಸದರಿ ಆಸ್ತಿ ವರ್ಗಾವಣೆ ಸಮಯದಲ್ಲಿ ನೋಟಿಸನ್ನು ನೀಡಿರುತ್ತೇವೆ.

ಓ.ಎಸ್. ನಂ. 294/2021

ಪಿ.ಡಬ್ಲ್ಯೂ: 01 (ಮಲ್ಲಿನಾಥ)

ನನ್ನ ತಂದೆಯ 2 ನೇ ಹೆಂಡತಿ ಎಂದು ಹೇಳಿಕೊಂಡ ಬಂದ ಭರಮವ್ವರವರು ತಕರಾರು ಮಾಡಿದ ಕಾರಣ ತಹಶೀಲ್ದಾರ್ ನ್ಯಾಯಾಲಯದಲ್ಲಿ ಖಾತಾ ವರ್ಗಾವಣೆ ಆದೇಶ ಆಗಿರುತ್ತದೆ.

ಅಜ್ಜಪ್ಪ ತಂದೆ ಕರಿಯಪ್ಪ ಯಾರೆಂದು ನನಗೆ ಗೊತ್ತಿಲ್ಲ. ಅವರು ಖಾತಾ ವರ್ಗಾವಣೆಗೆ ತಕರಾರು ಮಾಡಿರುತ್ತಾರೆ ಎಂದರೆ ಹೌದು. ನನ್ನ ಹೆಸರಿಗೆ ಇರುವ ಎಲ್ಲ ಆಸ್ತಿಯ ಖಾತಾ ವರ್ಗಾವಣೆಗೆ ಅವರು ತಕರಾರು ಮಾಡಿರುತ್ತಾರೆ. ನಾನು ಹಾಜರುಪಡಿಸಿರುವ ಪಹಣಿ ಪತ್ರಿಕೆಗಳಲ್ಲಿ ದಾವಾ ಆಸ್ತಿಯಲ್ಲಿ ಕೊಳವೆ ಬಾವಿ ಇರುವ ಬಗ್ಗೆ ನಮೂದು ಇಲ್ಲ. ನಾನು ಹಾಜರುಪಡಿಸಿರುವ ಕಂದಾಯ ರಶೀದಿಯನ್ನು 2018 ರಲ್ಲಿ ಪಡೆದಿರುತ್ತೇನೆ. ದಿಃ 03.08.2023 ರಂದು ಈ ದಾವೆಯಲ್ಲಿ ಅದನ್ನು ಸಲ್ಲಿಸಲು ಪಡೆದಿರುತ್ತೇನೆ ಎಂದರೆ ಹೌದು. ಸಾಕ್ಷಿ ಮುಂದುವರೆದು ಅದಕ್ಕೂ ಮೊದಲು ಕಟ್ಟಿರುವ ಕಂದಾಯ ರಶೀದಿಗಳು ನನ್ನ ಬಳಿ ಇವೆ. ಅವುಗಳನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.